**ಇಂದು ದಿನಾಂಕಃ 28-10-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ JPA ವಕೀಲರಿಂದಃ-**

ಪ್ರತಿವಾದಿ ನನ್ನ ತಂದೆ. ಕುಟುಂಬದ ಬಗ್ಗೆ ನನಗಿಂದ ಜಾಸ್ತಿ ನನ್ನ ತಂದೆಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿ ನನಗೂ ಸಹ ಗೊತ್ತಿದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ತಂದೆ ಮತ್ತು ತಾಯಿ ಹೆಸರು ಸಿದ್ದಪ್ಪ ಮತ್ತು ಶಂಕ್ರಮ್ಮ ಇರುತ್ತದೆ. ಸಿದ್ದಪ್ಪರವರ ಜೀವಿತ ಕಾಲದಲ್ಲಿ ಅವರ ಮಕ್ಕಳಾದ ಗುರುಲಿಂಗಪ್ಪ ಮತ್ತು ಸಿದ್ದಪ್ಪರವರು ಒಟ್ಟಿನಲ್ಲಿ ಇದ್ದರು ಎಂದರೆ ಸರಿ. ದಾವಾ ಜಮೀನು ಗ್ರಾಮಕ್ಕೆ ಹತ್ತಿಕೊಂಡು ಇದೆ ಎಂದರೆ ಸರಿ. ದಾವಾ ಜಮೀನಿನಲ್ಲಿ ನೀರಾವರಿ ಭೂಮಿ ಇದೆ ಎಂದರೆ ಸಾಕ್ಷಿ ಬಂಜರು ಭೂಮಿ ಇದೆ ಆದ್ದರಿಂದ ಅದರಲ್ಲಿ ಸಾಗುವಳಿ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನೀರಾವರಿ ಭೂಮಿ ಇದ್ದ ಕಾರಣ ಸಿದ್ದಪ್ಪನ ಮಕ್ಕಳು ದಾವಾ ಆಸ್ತಿಯನ್ನು ಒಟ್ಟಿನಲ್ಲಿ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಈಗ 40 ವರ್ಷಗಳ ಹಿಂದೆ ಪಾಲು ವಿಭಾಗವಾಗಿರುತ್ತದೆ. ಆ ಸಮಯಕ್ಕೆ ಯಾವುದೇ ದಾಖಲೆ ಬರೆದಿರುವುದಿಲ್ಲ. ಪಾಲು ಆಗಿದೇ ಎಂದು ತೋರಿಸಲು ಯಾವುದಾದರೂ ದಾಖಲೆ ಸಲ್ಲಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಯಾವುದೇ ದಾಖಲೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ನನ್ನ ಪಾಲಿಗೆ ಬಂದಿದ್ದೆ ಎಂದು ತೋರಿಸಲು ವರ್ಗಾವಣೆ ಪತ್ರ ಸಲ್ಲಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ವರ್ಗಾವಣೆ ಮಾಡಿಸಿಲ್ಲ ಎಂದು ನುಡಿಯುತ್ತಾರೆ. ನಾನು 3ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಜಮೀನಿನ ಸ.ನಂ. 92 ಇದೆ. ಸಿದ್ದಪ್ಪನ ಮಕ್ಕಳಿಗೆ ಪಾಲು ವಿಭಾಗದಂತೆ ಜಮೀನುಗಳು ವರ್ಗಾವಣೆಯಾಗಿವೆ ಎಂದರೆ ಸರಿ.

ದಾವಾ ಜಮೀನು ಮೊದಲು ಗುರುಲಿಂಗಪ್ಪರವರ ಹೆಸರಿನಲ್ಲಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲಾ ಕುಟುಂಬದ ಆಸ್ತಿ ಮೊದಲು ಗುರುಲಿಂಗಪ್ಪರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಗುರುಲಿಂಗಪ್ಪರವರ ಆಸ್ತಿ ವಾದಿಯ ಹೆಸರಿನಲ್ಲಿ ವರ್ಗಾವಣೆಯಾಗಿರುತ್ತದೆ ಎಂದರೆ ಸಾಕ್ಷಿ ಗುರುಲಿಂಗಪ್ಪರವರ ಹೆಸರಿನಿಂದ ವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಮತ್ತು ವಾದಿ ದಾವಾ ಜಮೀನನ್ನು ಪಾಲಿನಲ್ಲಿ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಮೊದಲಿನ ಮಾಲೀಕರು ಗುರುಲಿಂಗಪ್ಪರವರು ಇದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಹಿರಿಯ ಮಗನಿದ್ದ ಕಾರಣ ಅವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುರುಲಿಂಗಪ್ಪ ಹಿರಿಯ ಮಗನಿದ್ದ ಕಾರಣ ಅವನ ಹೆಸರಿಗೆ ವರ್ಗಾವಣೆಯಾಗಿದೆ ಎಂದು ಯಾವುದೇ ದಾಖಲೆ ಇಲ್ಲ.

ಗುರುಲಿಂಗಪ್ಪ, ವಾದಿ ಹಾಗೂ ಪ್ರತಿವಾದಿಯ ಮಧ್ಯ ದಾವಾ ಆಸ್ತಿಯ ಬಗ್ಗೆ ಮನಸ್ಥಾಪ ಇಲ್ಲ ಎಂದರೆ ಸಾಕ್ಷಿ ಯಾವುದೇ ಮನಸ್ಥಾಪ ಇಲ್ಲದೇ ಪಾಲು ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಗುರುಲಿಂಗಪ್ಪರವರು ಮೃತಪಟ್ಟ ನಂತರ ವಾದಿಯ ಹೆಸರಿನಲ್ಲಿ ವರ್ಗಾವಣೆಯಾಗಿದ್ದು, ಒಟ್ಟಿನಲ್ಲಿದ್ದರು ಸಹ ದಾವಾ ಆಸ್ತಿಯನ್ನು ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ಒಳ್ಳೆಯ ಮನುಷ್ಯ ಎಂದರೆ ಸರಿ. ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಸತ್ಯ ಹೊರಬರುತ್ತದೆ ಎಂದು ತಿಳಿದು ಅವರಿಂದ ವಿಶೇಷ ಮುಖ್ತ್ಯಾರ ನಾಮವನ್ನು ಪಡೆದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ನನ್ನ ತಂದೆಗೆ ಸರಿಯಾಗಿ ಕಣ್ಣು ಕಾಣುವುದಿಲ್ಲ ಮತ್ತು ಕಿವಿ ಕೇಳುವುದಿಲ್ಲ ಹಾಗೂ ಇಲ್ಲಿಯವರೆಗೆ ಪ್ರತಿವಾದಿ ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಆದ್ದರಿಂದ ನಾನು ನ್ಯಾಯಾಲಯಕ್ಕೆ ಪ್ರತಿ ದಿನಾಂಕದಂದು ಬರುತ್ತಿದ್ದೇನೆ ಎಂದು ನುಡಿಯುತ್ತಾರೆ. ದಿನಾಂಕ 20-11-2021ರಂದು ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯಿಂದ ಸಹಿ ಪಡೆದು ನ್ಯಾಯಾಲಯಕ್ಕೆ ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರವನ್ನು ನನ್ನ ತಂದೆಗೆ

ನಾನು ಓದಿ ಹೇಳಿಲ್ಲ. ಸಾಕ್ಷಿ ಮುಂದುವರೆದು ವಕೀಲರ ಮುಖಾಂತರ ಓದಿಸಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ವಕೀಲರು ಎಲ್ಲಿ ಪ್ರತಿವಾದಿಗೆ ಓದಿ ಹೇಳಿದ್ದಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ನನ್ನ ತಂದೆಗೆ ಕಾರಿನಲ್ಲಿ ಚಿಂಚೋಳಿಗೆ ಕರೆದುಕೊಂಡು ಬಂದಾಗ ಓದಿ ಹೇಳಿದ್ದಾರೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ನನ್ನ ತಂದೆಗೆ ಕಾರಿನಲ್ಲಿ ಚಿಂಚೋಳಿ ಕರೆದುಕೊಂಡು ಬಂದಿದ್ದಾರೆ ಎಂದು ನನಗೆ ನೆನಪಿಲ್ಲ. ಈಗ 3 ವರ್ಷಕ್ಕೂ ಮೇಲ್ಪಟ್ಟು ಹಿಂದೆ ನನ್ನ ತಂದೆಗೆ ಕಾರಿನಲ್ಲಿ ಚಿಂಚೋಳಿಗೆ ಕರೆದುಕೊಂಡು ಬಂದಿರುತ್ತೇನೆ. ಯಾವ ದಿನಾಂಕದಂದು ನೀವು ಪ್ರತಿವಾದಿಯ ಸಹಿ ಪಡೆದಿರುತ್ತಿರಿ ಮತ್ತು ಯಾವ ದಿನಾಂಕದಂದು ನೀವು ಪ್ರತಿವಾದಿಗೆ ಓದಿ ಹೇಳಿರುತ್ತಿರಿ ಎಂದು ಪ್ರಶ್ನಿಸಿದಾಗ ಸಾಕ್ಷಿ ಒಂದೇ ದಿನದಂದು ಅವರಿಗೆ ಚಿಂಚೋಳಿಗೆ ಕರೆದುಕೊಂಡು ಬಂದು ಓದಿಸಿ ಸಹಿ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಹಾಗಿದ್ದರೇ ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ಎಲ್ಲಿ ಸಹಿ ಮಾಡಿರುತ್ತಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಚಿಂಚೋಳಿಯಲ್ಲಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಗೊತ್ತಾಗದಂತೆ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಪಾಲು ಆಗಿಲ್ಲ ಎಂದು ಗೊತ್ತಿದ್ದರು ಸಹ ನಾನು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸಲ್ಲಿಸುವ ಮೊದಲು ಪ್ರತಿವಾದಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ತಯಾರಾಗಿರುತ್ತಾರೆ ಎಂದು ಸೂಚಿಸಿದಾಗ ಸಾಕ್ಷಿ ಈಗ 15 ವರ್ಷಗಳ ಹಿಂದೆ ನನ್ನ ತಂದೆ ತಮ್ಮ ಮಕ್ಕಳಿಗೆಲ್ಲ ದಾವಾ ಆಸ್ತಿಯನ್ನು ಹಂಚಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಈ ರೀತಿ ನನ್ನ ತಂದೆ ದಾವಾ ಆಸ್ತಿಯನ್ನು ಪ್ರತಿವಾದಿ ತಮ್ಮ ಮಕ್ಕಳಿಗೆ ಹಂಚಿಕೊಟ್ಟಿದ್ದಾರೆ ಎಂದು ದಾಖಲೆ ಬರೆದಿರುತ್ತಾರೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ದಾಖಲೆ ಬರೆದಿರುತ್ತಾರೆ ಮತ್ತು ಅದರಲ್ಲಿ ವಾದಿ ಸಹಿ ಸಹ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಹಂಚಿಕೊಂಡ ನಂತರ ದಾವಾ ಆಸ್ತಿಯ ವರ್ಗಾವಣೆಗಾಗಿ ಅರ್ಜಿಯನ್ನು ಸಲ್ಲಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಮಾತ್ರ ವರ್ಗಾವಣೆ ಮಾಡಿಕೊಂಡಿದ್ದೇನೆ ಮತ್ತು ನನ್ನ ಇಬ್ಬರು ಸಹೋದರರು ವರ್ಗಾವಣೆ ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಪಾಲುಗಾರಿಕೆಯಲ್ಲಿ ದಾವಾ ಆಸ್ತಿ ಯಾರಿಗೆ ಬಂದಿರುತ್ತದೆ ಎಂದು ಸೂಚಿಸಿದಾಗ ಸಾಕ್ಷಿ ನನ್ನ ಅಣ್ಣನಾದ ಸಿದ್ದಣ್ಣರವರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. 15 ವರ್ಷಗಳ ಹಿಂದೆ ಆದ ಪಾಲುಗಾರಿಕೆಯಲ್ಲಿ ಬರೆದ ದಾಖಲೆಯಲ್ಲಿ ಯಾರಿಗೆ ಯಾವ ಪಾಲು ಬಂದಿದ್ದೆ ಎಂದು ನಮೂದು ಇದೆ. ಸದರಿ ಪಾಲುಗಾರಿಕೆ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸದರಿ ದಾಖಲೆ ಯಾವ ದಾಖಲೆ ಮೇಲೆ ಬರೆದಿದ್ದಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಖಾಲಿ ಕಾಗದ ಮೇಲೆ ಬರೆದಿದ್ದಾರೆ ಎಂದು ನುಡಿಯುತ್ತಾರೆ. ಆ ಸಮಯಕ್ಕೆ ಸುಭಾಶ ಚಂದ್ರ ಪತ್ತೇಪುರ, ಮಕ್ಬುಲ ಸಾಬ ದಫ್ವೆದಾರ, ಅಮೃತರಾವ ಪತ್ತೇಪುರ, ಭವನರಾವ ರೈಗೋಳ, ಭವನ ರಾವ ಹಣಮಗೋಂಡ, ವಾದಿ ಇದ್ದರು. ಸಾಕ್ಷಿ ಮುಂದುವರೆದು ಇಷ್ಟು ನೆನಪಿದೆ ಉಳಿದ ವ್ಯಕ್ತಿಗಳು ಯಾರಿದ್ದರು ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ಪಾಲುಗಾರಿಕೆ ಪತ್ರವನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಇನ್ನು ಮುಂದೆ ಮಾಡುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ ದಾವಾ ಜಮೀನು ಪಾಲುಗಾರಿಕೆಯಲ್ಲಿ ನನ್ನ ಅಣ್ಣನ ಪಾಲಿಗೆ ಬಂದಿದ್ದೆ ಎಂದು ಉಲ್ಲೇಖವಿದೆ. ನನ್ನ ಮುಖ್ಯ ವಿಚಾರಣೆಯ ಶಪಥ ಪತ್ರದಲ್ಲಿ ದಾವಾ ಜಮೀನು ನನ್ನ ಅಣ್ಣನ ಪಾಲಿಗೆ ಬಂದಿದ್ದೆ ಎಂದು ಉಲ್ಲೇಖವಿಲ್ಲ.

ಇಲ್ಲಿಯವರೆಗೆ ದಾವಾ ಜಮೀನಿನ ಮಾಲೀಕರು ವಾದಿ ಮತ್ತು ಪ್ರತಿವಾದಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ಬೆಳೆ ಸಹ ವಾದಿ ಮತ್ತು ಪ್ರತಿವಾದಿ ಹಂಚಿಕೊಳ್ಳುತ್ತಿದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**